ಈ ದಿನ ದಿನಾಂಕಃ 06-09-2025 ರಂದು ಸಾಕ್ಷಿಯನ್ನು ಇಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ಶ್ರೀ ಹೆಚ್ ಟಿ ವಕೀಲರಿಂದಃ**

ಪ್ರಸ್ತುತ ದಾವೆಯನ್ನು ಸರ್ವೆ ನಂ 9999 ನ 2 ಎಕರೆ ಜಮೀನಿನ ಸಲುವಾಗಿ ಹೂಡಿರುತ್ತೇನೆ. ಸದರಿ ಜಮೀನು ಮಾನಾಚಾರಿಯವರ ಹೆಸರಿನಲ್ಲಿದೆ ಎಂದರೆ ಸರಿ. ಸದರಿ ಜಮೀನಿನ ಚೆಕ್ಕಬಂದಿ ನನಗೆ ಹೇಳಲಾಗುವುದಿಲ್ಲ. ಸದರಿ ಆಸ್ತಿಯನ್ನು ನನ್ನ ಮಾವನವರು ಸಾಗುವಳಿ ಮಾಡುತ್ತಿದ್ದರು. ಸದರಿ ಮಾನಾಚಾರಿಯವರು ನಮ್ಮ ಸಂಬಂಧಿಕರಲ್ಲ ಎಂದರೆ ಸರಿ. ಸದರಿಯವರು ವಿಶ್ವಕರ್ಮ ಜನಾಂಗಕ್ಕೆ ಸೇರಿದ್ದು, ನಾವುಲಂಬಾಣಿ ಜನಾಂಗಕ್ಕೆ ಸೇರಿದವರು ಎಂದರೆ ಸರಿ. ಸದರಿ ಮಾನಾಚಾರಿಯವರ ಜೀವಿತಾವಧಿಯಲ್ಲಿ ಸದರಿಯವರು ನಮ್ಮೊಂದಿಗಾಗಲಿ ಅಥವಾ ನಾವು ಅವರೊಂದಿಗಾಗಲಿ ಒಟ್ಟಾಗಿ ವಾಸವಾಗಿಲ್ಲ ಎಂದರೆ ಸರಿ. ಸದರಿ ಮಾನಾಚಾರಿಯವರಿಗೆ ಎಷ್ಟು ಜನ ಮಕ್ಕಳು ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಒಬ್ಬ ಮಗನಿದ್ದಾನೆ ಎಂದು ಮಾತ್ರ ಹೇಳುತ್ತಿದ್ದುರು ಎಂದು ನುಡಿಯುತ್ತಾರೆ. ಸದರಿ ಮಾನಾಚಾರಿಯವರಿಗೆ ಭಾಗ್ಯಮ್ಮ, ಸುಲೋಚನಮ್ಮ, ಪ್ರೇಮಮ್ಮ, ಕಮಲಮ್ಮ ಎಂಬ ಹೆಣ್ಣು ಮಕ್ಕಳಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿಯವರಿಗೆ ಹೆಣ್ಣುಮಕ್ಕಳು ಇರುವ ವಿಚಾರ ನನಗೆ ಗೊತ್ತಿಲ್ಲ ಮತ್ತು ನಾನು ತಿಳಿದುಕೊಂಡಿಲ್ಲ. ಸದರಿ ಹೆಣ್ಣುಮಕ್ಕಳು ಮಾನಾಚಾರಿಯವರ ವಾರಸುದಾರರು ಆಗಿದ್ದು ಸದರಿಯವರನ್ನು ಪ್ರಸ್ತುತ ದಾವೆಯಲ್ಲಿ ಪಕ್ಷಗಾರಾಗಿ ಸೇರಿಸಿಲ್ಲ ಎಂದರೆ ಸರಿ. ಪ್ರತಿವಾದಿಯು ಸಹ ಮಾನಾಚಾರಿಯವರ ಮಗನಾಗಿದ್ದು ಸದರಿಯವರ ವಾರಸುದಾರರು ಎಂದರೆ ಸರಿ. ದಾವಾಸ್ತಿ ಮಾನಾಚಾರಿಯರಿಗೆ ಯಾವ ರೀತಿ ಬಂತು ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ದರ್ಖಾಸ್ತು ಮೂಲಕ ಬಂದಿರುತ್ತದೆ ಎಂದು ನುಡಿಯುತ್ತಾರೆ. ಹಾಗಾಗಿ ಸದರಿ ಜಮೀನನ್ನು ಮಾನಾಚಾರಿ ಮತ್ತು ಅವರ ವಂಶಸ್ಥರೇ

ಅನುಭವಿಸಬೇಕಾಗಿದ್ದು ಅದನ್ನು ಬೇರೆ ಯಾರಿಗೂ ವರ್ಗಾವಣೆ ಮಾಡುವ ಹಕ್ಕು ಮಾನಾಚಾರಿಯವರಿಗೆ ಇರಲಿಲ್ಲ ಎಂದರೆ ಸರಿ.

ನಿಪಿ-1 ನ್ನು ಮಾನಾಚಾರಿಯವರು ಯಾವ ದಿನಾಂಕದಂದು ಬರೆದುಕೊಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿಪಿ-1 ನ್ನು ಹೊರತುಪಡಿಸಿ ಮಾನಾಚಾರಿಯವರು ನಮಗೆ ಬೇರೆಯಾವುದೇ ದಾಖಲೆಯನ್ನು ದಾವಾಸ್ತಿಯ ಕುರಿತು ಬರೆದುಕೊಟ್ಟಿಲ್ಲ ಎಂದರೆ ಸರಿ. ನಿಪಿ-1 ನ್ನು ಬರೆದುಕೊಟ್ಟು ಸುಮಾರು 14 ವರ್ಷಗಳು ಕಳೆದಿವೆ ಎಂದರೆ ಸರಿ. ಸದರಿ 14 ವರ್ಷಗಳಿಂದಲೂ ನಾವು ನಿಪಿ-1 ಆಧಾರದ ಮೇಲೆ ಯಾವುದೇ ಖಾತಾ ಬದಲಾವಣೆಯನ್ನು ನಮ್ಮ ಹೆಸರಿಗೆ ಮಾಡಿಸಿಕೊಂಡಿಲ್ಲ ಎಂದರೆ ಸರಿ. ನಿಪಿ-1ರ ಆಧಾರದ ಮೇಲೆ ನಾನು ಯಾವುದೇ ನ್ಯಾಯಾಲಯದಲ್ಲಿ ಪ್ರೊಬೇಟ್ ಆದೇಶವನ್ನು ಪಡೆದಿಲ್ಲ ಎಂದರೆ ಸರಿ. ಹಾಗಾಗಿ ಪ್ರೊಬೇಟ್ ದಾಖಲೆ ಪಡೆಯದ ಕಾರಣ ನಿಪಿ-1ರ ಆಧಾರದ ಮೇಲೆ ಯಾವುದೇ ಖಾತೆ ಬದಲಾವಣೆ ಮಾಡಲು ಕಾನೂನಿನಲ್ಲಿ ರಹವಿಲ್ಲ ಎಂದರೆ (ಸದರಿ ಪ್ರಶ್ನೆ ಕಾನೂನಾತ್ಮಕ ಪ್ರಶ್ನೆಯಾದ ಕಾರಣ ಸದರಿ ಪ್ರಶ್ನೆಗೆ ಉತ್ತರಿಸಲು ವಿನಾಯತಿ ನೀಡಲಾಯಿತು).

ನಿಪಿ-1 ರ ಸಮಯಕ್ಕೆ ಮಾನಾಚಾರಿಯವರ ಮಕ್ಕಳು ವಯಸ್ಕರಾಗಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಮಾನಾಚಾರಿಯವರ ವಾರಸುದಾರರಿಗೆ ಯಾವುದೇ ಮಾಹಿತಿಯನ್ನು ನೀಡದೇ ನಿಪಿ-1 ನ್ನು ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಮಾನಾಚಾರಿಯವರ ಮರಣೋತ್ತರ ಕ್ರಿಯಾದಿಗಳನ್ನು ನಾವು ಮಾಡಿಲ್ಲ ಎಂದರೆ ಸರಿ. ಸದರಿ ಮಾನಾಚಾರಿಯವರು ತಮ್ಮ ಜೀವಿತಾವಧಿಯಲ್ಲಿ ಪ್ರತಿವಾದಿಯೊಂದಿಗೆ ವಾಸವಾಗಿದ್ದರು ಎಂದರೆ ಸರಿ.

ನಿಪಿ-1 ರಲ್ಲಿ ಹೇಳಿದಂತೆ ಸದರಿ ಮಾನಾಚಾರ್ ರವರ ಅನುಪಾನುಗಳನ್ನು ನಾವೇ ನೋಡಿಕೊಂಡಿದ್ದು ಮುಂದೆಯೂ ಸಹ ನಾವೇ ನೋಡಿಕೊಳ್ಳುತ್ತೇವ ಎಂಬ ಭರವಸೆ ಮತ್ತು

ನಂಬಿಕೆ ಇರುವುದರಿಂದಲೂ ಎಂದು ಪುಟ ಸಂಖ್ಯೆ 1 ರಲ್ಲಿ ನಮೂದು ಇದ್ದು , ಆ ರೀತಿ ಆನುಪಾನುಗಳನ್ನು ನೋಡಿಕೊಂಡ ಬಗ್ಗೆ ಮತ್ತು ಸದರಿ ಮಾನಾಚರಾರ್ ಮತ್ತು ಶಾರದಮ್ಮರವರನ್ನು ಆಸ್ಪತ್ರೆಗೆ ತೋರಿಸಿದ ದಾಖಲೆಗಳಾಗಲಿ ಇವೆಯೇ ಎಂದರೆ ಸಾಕ್ಷಿ ಯಾವುದು ದಾಖಲೆಗಳು ಇಲ್ಲ ಎಂದು ನುಡಿಯುತ್ತಾರೆ. ನಾನು ಯಾವತ್ತಿಗೂ ಸಹ ಗಂಡುಗನಹಂಕಲು ಗ್ರಾಮದಲ್ಲಿ ವಾಸವಿರಲಿಲ್ಲ ಎಂದರೆ ಸಾಕ್ಷಿ ಹೋಗುವುದು ಬರುವುದು ಮಾಡುತ್ತಿದ್ದೆವು ಎಂದು ನುಡಿಯುತ್ತಾರೆ. ಸದರಿ ಗ್ರಾಮದಲ್ಲಿ ವಾಸವಿದ್ದ ಕುರಿತು ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ. ನಾನು ನಿಪಿ-1 ಕೂಕ ಪೂರ್ವದಿಂದಲೂ ಸಹ ಶಿವಮೊಗ್ಗದ ಗುರುಪುರ 2ನೇ ಕ್ರಾಸ್ ನಲ್ಲಿ ವಾಸವಾಗಿದ್ದೆನೆ ಎಂದರೆ ಸರಿ.

ಸದರಿ ನಿಪಿ-1ರ ಸರ್ವೆ ನಂ 9999 ರಲ್ಲಿ 2 ಎಕರೆ 20 ಗುಂಟೆ ಒಟ್ಟು ವಿಸ್ತೀರ್ಣ ಇದ್ದು ಅದರಲ್ಲಿ 1 ಎಕರೆ 1 ಗುಂಟೆ ಯಾವ ಭಾಗದ ಆಸ್ತಿಗಾಗಿ ನಿಪಿ-1ನ್ನು ಬರೆಯಲಾಗಿದೆ ಎಂದು ನಮೂದು ಇಲ್ಲ ಎಂದರೆ ಸರಿ. ಸದರಿ 1 ಎಕರೆ 1 ಗುಂಟೆ ಜಮೀನು ಯಾವ ಭಾಗದಲ್ಲಿ ಬರುತ್ತದೆ ಎಂದು ನನಗೆ ನಿರ್ದಿಷ್ಟವಾಗಿ ಹೇಳಲಾಗುವುದಿಲ್ಲ ಎಂದರೆ ಸರಿ.

ನಿಪಿ-1ನ್ನು ಬರೆಯುವ ಸಮಯದಲ್ಲಿ ನನ್ನ ತಂಗಿ ಪ್ರೇಮಾ ಬಾಯಿ ಮಾನಾಚಾರಿಯವರ ಜೊತೆಗೆ ಇದ್ದರು. ನಿಪಿ-1 ನ್ನು ತಾಲ್ಲೂಕು ಕಚೇರಿಯಲ್ಲಿ ಮದಾಹ್ನ 1.00 ರಿಂದ 2.00 ಗಂಟೆವರೆಗೆ ಬರೆದಿರುತ್ತಾರೆ. ಅದನ್ನು ಯಾರು ಬರೆದರು ಎಂದು ನನಗೆ ಗೊತ್ತಿಲ್ಲ. ಸದರಿ ಸಮಯಕ್ಕೆ ಪ್ರೇಮಬಾಯಿ, ಮಾನಾಚಾರಿ , ಆತನ ಹೆಂಡತಿ ಶಾರದಮ್ಮ ಹಾಜರಿದ್ದರು. ಬೇರೆ ಯಾರು ಹಾಜರಿರಲಿಲ್ಲ. ನಿಪಿ-1 ಕ್ಕೆ ಯಾರು ಸಹಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದರಿ ವಿಚಾರದ ಕುರಿತು ಸಂಪೂರ್ಣ ಮಾಹಿತಿ ಇಲ್ಲ ಎಂದರೆ ಸರಿ. ಸದರಿ ನಿಪಿ-1 ರಲ್ಲಿ ನಮಗೂ ಮತ್ತು ಮಾನಾಚಾರಿ ನಡುವೆ ಯಾವ ರೀತಿ ಸಂಬಂಧವಿದೆ ಎಂದು ನಮೂದಿಸಿಲ್ಲ ಎಂದರೆ ಸರಿ. ಅವರ ನಡುವೆ ಯಾವುದೇ

ಸಂಬಂಧವಿಲ್ಲದ ಕಾರಣ ಸದರಿ ಮಾನಾಚಾರಿ ಮತ್ತು ಶಾರದಮ್ಮನವರು ನಿಪಿ-1 ನ್ನು ನವೇ ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ-1 ನ್ನು ಬಿಟ್ಟರೆ ದಾವಾಸ್ತಿಯ ಮೇಲೆ ನಮ್ಮ ಹಕ್ಕನ್ನು ಸಲ್ಲಿಸಲು ಯಾವುದೇ ದಾಖಲೆ ಇಲ್ಲ ಎಂದರೆ ಸರಿಯಲ್ಲ. ಹಾಗಾಗಿ ನಿಪಿ-1 ರಂತೆ ನಾವು ದಾವಾಸ್ತಿಗೆ ಯಾವುದೇ ಹಕ್ಕುದಾರರು ಮತ್ತು ಸ್ವಾಧೀನದಾರರು ಅಲ್ಲ ಎಂದರೆ ಸರಿಯಲ್ಲ.

ಮಾನಾಚಾರಿ ಮತ್ತು ಶಾರದಮ್ಮನವರು ಎಲ್ಲಿ ಮರಣಹೊಂದಿದ್ದರು ಎಂದರೆ ಸಾಕ್ಷಿ ತರೀಕೆರೆಯ ಮಾರುತಿ ಬೀದಿಯಲ್ಲಿ ಮರಣಹೊಂದಿದ್ದರು ಎಂದು ನುಡಿಯುತ್ತಾರೆ, ಸದರಿ ಶಾದರಮ್ಮನವರು ಕಳಸದಲ್ಲಿ ಮರಣಹೊಂದಿದ್ದರು ಎಂದರೆ ಸರಿ. ಸದರಿ ಶಾರದಮ್ಮನವರು ನಿಪಿ-1ಕ್ಕೂ ಪೂರ್ವವೇ ಕಳಸದಲ್ಲಿ ವಾಸವಾಗಿದ್ದರು ಎಂದರೆ ಸರಿ. ಸದರಿ ಪ್ರೊಬೇಟ್ ನ್ನೂನು ದಾವಾಸ್ತಿಯ ಮೇಲೆ ಪಡೆದಿಲ್ಲದ ಕಾರಣ ನನಗೆ ದಾವಾಸ್ತಿಯ ಮೇಲೆ ಯಾವುದೇ ಹಕ್ಕು ಇಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಪಿ-1ರ ಪುಟಸಂಖ್ಯೆ 1 ರ ಹಿಂಭಾಗದಲ್ಲಿರುವ ಭಾವಚಿತ್ರಗಳು ಮಾನಾಚಾರಿ ಮತ್ತು ಶಾರದಮ್ಮನವರದೇ ಎನ್ನುವುದನ್ನು ತೋರಿಸಲು ಬೇರೆ ಯಾವುದೇ ಗುರುತಿನ ಚೀಟಿಗಳನ್ನು ಹಾಜರಪಡಿಸಿಲ್ಲ ಎಂದರೆ ಸರಿ. ನಾನು ಗುರುಪುರದಲ್ಲಿ ವಾಸವಿರುವ ಕಾರಣ ದಾವಾಸ್ತಿಯನುನಸ್ವಂತಃ ಸಾಗುವಳಿ ಮಾಡುತ್ತಿಲ್ಲ ಎಂದರೆ ಸರಿ.

ಪ್ರತಿವಾದಿ ಈ ದಾವೆಗೆ ಸಲ್ಲಿಸಿರುವ ತಕರಾರಿನ ಮಾಹಿತಿ ನನಗೆ ಇಲ್ಲ ಎಂದರೆ ಸರಿಯಲ್ಲ. ನಾನು ಸಲ್ಲಿಸಿರುವ ಮುಖ್ಯ ವಿಚಾರಣಾ ಪ್ರ.ಪತ್ರದಲ್ಲಿನ ಸಂಗತಿಗಳು ನನಗೆ ಗೊತ್ತಿಲ್ಲ ಎಂದರೆ ಸರಿ. ದಾವಾಸ್ತಿಯನ್ನು ಮಾನಾಚಾರಿ ಮತ್ತು ಶಾರದಮ್ಮನವರು ಯಾವತ್ತಿಗೂ ಸಹ ಯಾರಿಗೂ ಸಹ ವರ್ಗಾವಣೆ ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ-1 ನ್ನುನಾನು ನನ್ನತಂಗಿಯೊಂದಿಗೆ ಶಾಮೀಲಾಗಿ ಸುಳ್ಳು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-1ನ್ನು ಮಾನಾಚಾರಿ ಮತ್ತು ಶಾರದಮ್ಮನವರು ಬರೆದುಕೊಡದ ಕಾರಣ

ಸದರಿ ಆಸ್ತಿಗೆ ನಾನು ಹಕ್ಕುದಾರಳಲ್ಲ ಎಂದರೆ ಸರಿಯಲ್ಲ. ನಿಪಿ-1ನ್ನು ಹೊರತುಪಡಿಸಿ ದಾವಾಸ್ತಿಯ ಮೇಲೆನಮ್ಮ ಹಕ್ಕನ್ನುಸಾಧಿಸಲು ಬೇರೆ ಯಾವುದೇ ದಾಖಲೆ ಇಲ್ಲ ಎಂದರೆ ಸರಿ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.